**ದಿನಾಂಕಃ 15.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ಮಾಹಿತಿಯನ್ನು ನನ್ನ ತಾಯಿಯವರು ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನಿಖರವಾಗಿ ಮಾಹಿತಿ ಇರುತ್ತದೆ. ವಾದ ಪತ್ರಕ್ಕೆ ಮಾಹಿತಿಯನ್ನು ನನ್ನ ತಾಯಿಯವರು ನೀಡಿರುತ್ತಾರೆ. ವಾದ ಪತ್ರದಲ್ಲಿ ಬರೆದಿರುವ ವಿಷಯವನ್ನು ಕೇಳಿ ತಿಳಿದುಕೊಂಡಿದ್ದೇನೆ. ದಾವೆಯನ್ನು ಭಾಗಾಂಶ ಕೋಡಿ ಹೂಡಿರುತ್ತೇನೆ. 4 ಸ್ವತ್ತುಗಳ ಮೇಲೆ ದಾವೆ ಹೂಡಲಾಯಿತು. ಸ.ನ. 264/4, 265/5 ರಲ್ಲಿ 1 ಎಕರೆ 24 ಗುಂಟೆ, 266 ರಲ್ಲಿ 1 ಎಕರೆ 13 ಗುಂಟೆ, 264 ರಲ್ಲಿ 23 ಗುಂಟೆ. ಮನೆ ಸ.ನ. ಗೊತ್ತಿರುವುದಿಲ್ಲ. ಸದರಿ ಜಮೀನಿಗಳ ಚೆಕ್ಕುಬಂದಿ ಗೊತ್ತಿರುವುದಿಲ್ಲ. ನನಗೆ 38 ವಯಸ್ಸು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು ಎಷ್ಟು ನಮೂದಾಗಿರುತ್ತದೆಂದು ಗೊತ್ತಿರುವುದಿಲ್ಲ.

ನಾನು 10 ನೇ ತರಗತಿ ವಿಧ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಮದುಗಿರಿ ತಾಲ್ಲೂಕಿನ ತೆರೆಯೂರಿನವನಾಗಿರುತ್ತೇನೆ. ನಾನು ಹುಟ್ಟಿ ಬೆಳೆದಿದ್ದು ತೆರೆಯೂರಿನಲ್ಲಿ. ಈಗಲೂ ಸಹ ಅಲ್ಲಿಯೇ ಇರುತ್ತೇನೆ. ನನ್ನ ಸಾಕ್ಷಿಯ ಪ್ರಮಾಣ ಪತ್ರದಲ್ಲಿ ನನಗೆ 28 ವಯಸ್ಸು ಹಾಗೂ ನಾನು ಗುಟ್ಟ ಕೊಡಿಗೆ ಹಳ್ಳಿಯಲ್ಲಿ ವಾಸಿಸುತ್ತೇನೆಂದು ಬರೆದಿರುತ್ತೇನೆಂದರೆ ಸಾಕ್ಷಿಯು ಗುಟ್ಟ ಕೊಡಿಗೆ ಹಳ್ಳಿ ಹೋಬಳಿಯಾಗಿರುತ್ತದೆ, ತೆರೆಯೂರು ಗ್ರಾಮವಾಗಿರುತ್ತದೆಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ದಿಕ್ಕು ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಾಯಿಯವರಿಗೆ 65 ವರ್ಷ ಆಗಿರುತ್ತದೆ. ನನ್ನ ತಾಯಿಯವರು ಅವರ ಕೆಲಸ ಮಾಡಿಕೊಂಡು ಆರೋಗ್ಯವಾಗಿ ಇರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿಯವರ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನನ್ನ ತಾಯಿಯವರು ಖುದ್ದಾಗಿ ಹಾಜರಾಗಿ ಸಾಕ್ಷಿ ಹೇಳಲು ಏನು ತೊಂದರೆ ಇಲ್ಲ ಎಂದರೆ ಸರಿಯಲ್ಲ. ತಾಯಿಯವರು ಸಾಕ್ಷಿ ಹೇಳಲು ಆರೋಗ್ಯ ಸರಿ ಇಲ್ಲದ ಕಾರಣ ಬರಲು ಆಗುವುದಿಲ್ಲ. ನನ್ನ ತಾಯಿಯವರು ಸಾಕ್ಷಿ ಹೇಳಲು ಸಮರ್ಥವಾಗಿದ್ದರೂ ಸಹ ಸುಳ್ಳು ಜಿ ಪಿ ಎ ಯನ್ನು ಪಡೆದು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಾಯಿಯವರು ಶಾಲೆಗೆ ಹೋಗಿರುವುದಿಲ್ಲ. ನಮ್ಮ ತಾಯಿಯವರು ಸರ್ಕಾರಿ ಶಾಲೆಯಾಗಲೀ ಅಥವಾ ಖಾಸಗಿ ಶಾಲೆಯಲ್ಲಾಗಲೀ ಓದಿರುವುದಿಲ್ಲ. ನಮ್ಮ ತಾಯಿಯವರು ಯಾವಾಗ ಹಾಗೂ ಎಲ್ಲಿ ಹುಟ್ಟಿದರು ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು

ಆಗುತ್ತದೆಯೇ ಎಂದರೆ ಆಗಿನ ಕಾಲದಲ್ಲಿ ದಾಖಲೆಗಳು ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 9 ನೇ ಕಂಡಿಕೆಯಲ್ಲಿ ಹೇಳಿದಂತೆ ದಾವಾ ಆಸ್ತಿಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಅವರು ಹಾಜರು ಪಡಿಸಿದ ದಾಖಲಾತಿಗಳನ್ನು ತೋರಿಸಿ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೀರಿ ಎಂದು ಪ್ರಶ್ನಿಸಿದರೆ ಸಾಕ್ಷಿಯು ವಕೀಲರನ್ನು ಕೇಳಬೇಕು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ 1 ನೇ ಸ್ವತ್ತುನ ಪೂರ್ವಕ್ಕೆ ಕೃಷ್ಣಯ್ಯನವರ ಜಮೀನು, ಪಶ್ಚಿಮಕ್ಕೆ ನರಸಪ್ಪರವರ ಜಮೀನು, ಉತ್ತರದ ಕಡೆ ರಸ್ತೆ ಮತ್ತು ದಕ್ಷಿಣದ ಕಡೆ ನರಸಪ್ಪ ರವರ ಜಮೀನು ಇರುತ್ತದೆಂದರೆ ಸರಿ. ಸ.ನ. 264/2 ರ 1 ಎಕರೆ 23 ಗುಂಟೆ ವಿಸ್ತೀರ್ಣವುಳ್ಳ ಜಮೀನಿಗೆ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಮುನಿಯಪ್ಪರವರ ಸ್ವತ್ತು ಎಂದರೆ ಸರಿ. 3 ನೇ ಸ್ವತ್ತು ಸ. ನ. 266 ರಲ್ಲಿ ಪೂರ್ವಕ್ಕೆ ತಿಗಳರ ಜಮೀನು, ಪಶ್ಚಿಮಕ್ಕೆ ಶಿವಪ್ಪ ರವರ ಜಮೀನು, ಉತ್ತರಕ್ಕೆ ವೆಂಕಟರಮಣಪ್ಪರವರ ಜಮೀನು ಮತ್ತು ದಕ್ಷಿಣೆಕ್ಕೆ ಯಕಲಪ್ಪರವರ ಸ್ವತ್ತು ಎಂದರೆ ಸರಿ. 4 ನೇ ಸ್ವತ್ತು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸಂಜೀರಪ್ಪರವರ ಸ್ವತ್ತು, ಉತ್ತರಕ್ಕೆ ಮುನಿಶಾಮಪ್ಪರವರ ಸ್ವತ್ತು ಮತ್ತು ದಕ್ಷಿಣಕ್ಕೆ ರತ್ನಮ್ಮ ರವರ ಸ್ವತ್ತು ಎಂದರೆ ಸರಿ. ಸದರಿ ವಿಷಯಗಳು ಸತ್ಯವಾಗಿದ್ದರೂ ಸಹ ದಾವಾ ಸ್ವತ್ತಿನ ಅನುಸೂಚಿಯಲ್ಲಿ ಸುಳ್ಳು ಚೆಕ್ಕುಬಂದಿಯನ್ನು ತೋರಿಸಿರುತ್ತೀರಿ ಎಂದರೆ ಸರಿಯಲ್ಲ. ಯಾವ ದಾಖಲೆಯ ಆದಾರದ ಮೇಲೆ 4 ಸ್ವತ್ತುಗಳ ಚೆಕ್ಕುಬಂದಿಯನ್ನು ಬರೆದಿದ್ದೀರಿ ಎಂದರೆ ಸಾಕ್ಷಿಯು ದಾಖಲೆಗಳನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ದುರ್ಲಾಬಕ್ಕೊಸ್ಕರ ಹಾಗೂ ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂದು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾವು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ಇದ್ದೇವೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನ ಯಾವ ಯಾವ ಜಮೀನಿನಲ್ಲಿ ಯಾವ ಯಾವ ಬೆಳೆಯನ್ನು ಯಾವ ವರ್ಷದಲ್ಲಿ ಬೆಳೆದಿರುತ್ತೀರಿ ಎಂದು ದಾಖಲೆಗಳನ್ನು ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಯಾವ ಬೆಳೆಗಳನ್ನು ಮಾಡಿದ್ದೀರಾ ಎಂದು ಹಾಗೂ ಯಾವ ಬಿತ್ತನೆ ಬೀಜಗಳನ್ನು ತೇಗೆದುಕೊಂಡಿರುತ್ತೀರಾ ಹಾಗೂ ಕ್ರಿಮಿನಾಶಕ ಔಷಗಳನ್ನು ಪಡೆದಿರುತ್ತೀರಾ ಎಂಬುದಕ್ಕೆ ದಾಖಲೆಗಳನ್ನು ನೀಡಿರುತ್ತೀರಾ ಹಾಗೂ ಜಂಟಿ ಸ್ವಾ ದೀನದಲ್ಲಿ ಇದ್ದಿದ್ದನ್ನು ತೋರಿಸಲು ದಾಖಲೆಗಳನ್ನು ನಾವು ಜಮೀನುಗಳು ಇದ್ದ

ಊರಿನಲ್ಲಿ ಇರುವುದಿಲ್ಲ ಬೇರೆ ಕಡೆ ಇರುತ್ತೇವೆಂದು ನುಡಿಯುತ್ತಾರೆ. ಹಾಗೂ ದಾಖಲೆಗಳು ಖರೀದಿ ಮಾಡಿದನ್ನು ತೋರಿಸಲು ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಲಾಗಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**C/C ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**